ಶ್ರೀ ಜಿ. ರಾಜುಗೌಡ (ಆಹಾರ ಸಂಸ್ಕರಣೆ ರಾಜ್ಯ ಸಚಿವರು)

ಅ. ಕರ್ನಾಟಕ ಕೃಷಿ ಕೈಗಾರಿಕಾ ನಿಗಮವು ಇಲ್ಲಿಯವರೆಗೆ ಒಟ್ಟು 115.25 ಕೋಟಿ ರೂಪಾಯಿಗಳಷ್ಟು ನಷ್ಟ ಅನುಭವಿಸಿದೆ.

ಆ. ಈ ನಿಗಮವು 1975-76 ರಿಂದ ಇಲ್ಲಿಯವರೆಗೆ ಮೇಲ್ಕಂಡ ನಷ್ಟವನ್ನು ಅನುಭವಿಸಿರುತ್ತದೆ.

ಇ. ಸರ್ಕಾರದ ಮತಿಯಿಂದ ನಿಗಮಕ್ಕೆ ಪ್ರತಿ ವರ್ಷ ಯಾವುದೇ ವಿಧವಾದ ಅನುದಾನವನ್ನು ನೀಡುತ್ತಿಲ್ಲ. ಆದರೆ ಕೆಲರು ಸಂದರ್ಭದಲ್ಲಿ ನಿಗಮದ ಕೋರಿಕೆ ಮೇರೆಗೆ ಸರ್ಕಾರವು ನಿಗಮಕ್ಕೆ ಆರ್ಥಿಕ ನೆರವನ್ನು ನೀಡುತ್ತಲಿದೆ.

ಈ. 2001-02 ಹಾಗೂ 2002-03ನೇ ಸಾಲಿನಲ್ಲಿ ಈ ನಿಗಮವು ಕೈಗೊಂಡ ಕಾರ್ಯಕ್ರಮಗಳು ಹೀಗಿವೆ:

ಅ) ಬಲ್ಡೋಜರ್‌ಗಳ ಮೂಲಕ ಭೂ ಸಮತಟ್ಟು ಮಾಡುವಿಕೆ.

ಆ) ಕೃಷಿ ಯಂತ್ರೋಪಕರಣಗಳಾದ ಟ್ರಾ ಕ್ಟರ್, ಪವರ್ ಟಿಲ್ಲರ್, ಸ್ಪ್ರಿಂಕ್ಲರ್ ಡ್ರಿಪ್ ಇರ್ರಿಗೇಷನ್ ಯಂತ್ರಗಳು ಕ್ರಿಮಿನಾಶಕ ಸಿಂಪಡಿಸುವ ಯಂತ್ರಗಳ ಮಾರಾಟ.

ಇ) ಕೃಷಿ ಪರಿಕರಗಳ ಮಾರಾಟ,

ಈ) ಕ್ರಿಮಿನಾಶಕ ಔಷಧಿಗಳ ತಯಾರಿಕೆ ಮತ್ತು ಮಾರಾಟ.

ಉ) ಹರಳು ರೂಪದ ಸಾವಯವ ಗೊಬ್ಬರ (ಕರ್ನಾಟಕ ಅಗ್ರಿಗೋಲ್ಡ್) ತಯಾರಿಕ ಮತ್ತು ಮಾರಾಟ.

ಊ) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯವರ ಕೊಳವೆ ಬಾವಿಗಳ ನಿರ್ವಹಣೆ.

ಋ) ಪುಷ್ಪಗಳ ಹರಾಜು ಮತ್ತು ಹಣ್ಣುಗಳಿಂದ ಸಂಸ್ಕರಿಸಿದ ಆಹಾರ ತಯಾರಿಕೆ ಮತ್ತು ಮಾರಾಟ.

ಉ. ದಿನಾಂಕ: 30.11.2002ರ ಅಂತ್ಯದವರೆಗೆ ನಿಗಮದಲ್ಲಿ ಒಟ್ಟು 695 ಜನ ನೌಕರರು ಕೆಲಸ ನಿರ್ವಹಿಸುತ್ತಿದ್ದಾರೆ.

ಊ. ಇಲ್ಲ.

ಋ. ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಸಹಕಾರಿ ರಂಗದಲ್ಲಿರುವ ಸಕ್ಕರೆ ಕಾರ್ಖಾನೆಗಳು, ರೈತರಿಗೆ ಬಾಕಿ ಇರುವ ಹಣ ಪಾವತಿ

1854(2309): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಸಹಕಾರಿ ರಂಗದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬು ನೀಡಿದ ಎಷ್ಟು ದಿವಸಗಳೊಳಗಾಗಿ ಕಬ್ಬಿನ ಬಿಲ್ಲನ್ನು ಪಾವತಿಸಬೇಕೆಂಬ ನಿಯಮವಿರುವುದು;

ಆ. ನಿಗದಿತ ವೇಳೆಯಲ್ಲಿ ರೈತರಿಗೆ ಕಬ್ಬಿನ ಬಿಲ್ಲನ್ನು ರೈತರಿಗೆ ಕೊಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಇ. ರಾಜ್ಯದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳು ಲಾಭದಲ್ಲಿವೆ ಹಾಗೂ ಎಷ್ಟು ಸಕ್ಕರೆ ಕಾರ್ಖಾನೆಗಳು ನಷ್ಟದಲ್ಲಿವೆ. ವಿವರ ನೀಡುವುದು;

ಈ. ರೈತರಿಗೆ ನಿಗದಿತ ವೇಳೆಯಲ್ಲಿ ಕಬ್ಬಿನ ಬಿಲ್ಲು ಪಾವತಿ ಮಾಡದೇ ಹಾನಿಯಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಲಾಭದಾಯಕವನ್ನಾಗಿ ಮಾಡಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಕಬ್ಬು ಸರಬರಾಜು ಮಾಡಿದ ರೈತರಿಗೆ ಹಾಲಿ ಇರುವ ಕಬ್ಬು ನಿಯಂತ್ರಣ ಕಾಯ್ದೆ 1966ರ ಸೆಕ್ಷನ್-3(ಎ) ಪ್ರಕಾರ 14 ದಿನಗಳಲ್ಲಿ ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸಬೇಕಾಗುತ್ತದೆ.

ಆ. ಕಾರ್ಖಾನೆಯವರು ಸಕ್ಕರೆ ಮಾರಾಟ ಮಾಡಿದ ಹಣದಿಂದ ಹಾಗೂ ಸಕ್ಕರೆ ಆಧಾರದ ಮೇಲೆ ಪಡೆಯುವ ಸಾಲದ ಹಣದಿಂದ ರೈತರ ಕಬ್ಬಿನ ಬಿಲ್ಲನ್ನು ಪಾವತಿಸಲಾಗುತ್ತಿದೆ. ಆದರೆ ಹಲವಾರು ಆರ್ಥಿಕ ತೊಂದರೆಗಳಿಂದ ಕೆಲವು ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ಸಮಯಕ್ಕೆ ಪಾವತಿಸಲು ಸಾಧ್ಯವಾಗುತ್ತಿಲ್ಲ. ಆದರೂ ಕಾರ್ಖಾನೆಗಳ ಮೇಲೆ ಒತ್ತಡ ತಂದು ಕಬ್ಬಿನ ಬಿಲ್ಲನ್ನು ಪೂರ್ಣವಾಗಿ ಪಾವತಿಸಲು ಕ್ರಮವಿಡಲಾಗುತ್ತಿದೆ. ಆದರೆ, ಕೊನೆಯ ಹಂತದಲ್ಲಿ ರೈತರಿಗೆ ಪಾವತಿಸಬೇಕಾದ ಕಬ್ಬಿನ ಬಿಲ್ಲು ಬಾಕಿ ಇದ್ದಲ್ಲಿ ಕಬ್ಬು ನಿಯಂತ್ರಣ ಆದೇಶ ಉಪಬಂಧ-3(8)ರಂತೆ ಬಾಕಿ ಮೊತ್ತವನ್ನು "ಭೂ ಕಂದಾಯ ವಸೂಲಿ" ರೀತಿಯಲ್ಲಿ ಕಾರ್ಖಾನೆಯಿಂದ ವಸೂಲ್ಮಾಡಲು ಅವಕಾಶ ಇರುತ್ತದೆ.

ಇ. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ 2000-01ನೇ ಸಾಲಿನ ಅಂತ್ಯಕ್ಕೆ ಲಾಭ:ನಷ್ಟಗಳ ವಿವರ ಲಭ್ಯವಿದ್ದು, ಈ ಪ್ರಕಾರ 2000-01ನೇ ಸಾಲಿಗೆ 8 ಸಕ್ಕರೆ ಕಾರ್ಖಾನೆಗಳು ಲಾಭ ಗಳಿಸಿದ್ದು, 10 ಸಕ್ಕರೆ ಕಾರ್ಖಾನೆಗಳು ನಷ್ಟ ಅನುಭವಿಸಿರುತ್ತವೆ. 2001-02 ಅಂತ್ಯಕ್ಕೆ 15 ಸಹಕಾರಿ ಸಕ್ಕರೆ ಕಾರ್ಖಾನೆಗಳು ರೂ. 32642.49 ಲಕ್ಷ ನಷ್ಟವನ್ನು ಅನುಭವಿಸಿರುತ್ತವೆ. ಲಾಭ:ನಷ್ಟಗಳ ವಿವರವುಳ್ಳ ತಃಖ್ತೆಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಈ. ಸಕ್ಕರೆ ಕಾರ್ಖಾನೆಗಳು ಮುಖ್ಯವಾಗಿ ಮಾರುಕಟ್ಟೆಯಲ್ಲಿ ಸಕ್ಕರೆ ಬೆಲೆ ಕುಸಿತ ಹಾಗೂ ಹೆಚ್ಚುವರಿ ಸಕ್ಕರೆ ದಾಸ್ತಾನು ಸಮಸ್ಯೆಯಿಂದಾಗಿ ದುಡಿಯುವ ಬಂಡವಾಳದ ಮೇಲೆ ಹೆಚ್ಚಿನ ಬಡ್ಡಿ ಪಾವತಿಸುವುದರಿಂದ ಮತ್ತು ಕೆಲವು ಸಕ್ಕರೆ ಕಾರ್ಖಾನೆಗಳು ಪೂರ್ಣ ಸಾಮರ್ಥ್ಯದಲ್ಲಿ ಕಬ್ಬು ನುರಿಸದೇ ಅಧಿಕ ಉತ್ಪಾದನಾ ವೆಚ್ಚ ಇತ್ಯಾದಿಗಳಿಂದ ಆರ್ಥಿಕ ನಷ್ಟ ಅನುಭವಿಸಲು ಕಾರಣವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಲಭ್ಯವಿರುವ ಸವಲತ್ತುಗಳನ್ನು ಉಪಯೋಗಿಸಿಕೊಂಡು ಕಾರ್ಖಾನೆಗಳು ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾಗುತ್ತದೆ. ಮುಖ್ಯವಾಗಿ ಉತ್ಪನ್ನಗಳಾದ ಸಹ ವಿದ್ಯುತ್ ಉತ್ಪಾದನೆ, ಎಥನಾಲ್ ಉತ್ಪಾದನೆ ಮುಂತಾದವುಗಳು ಈ ದಿಸೆಯಲ್ಲಿ ಇತ್ತೀಚಿನ ಆಯಾಮಗಳಾಗಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಈ ಕೆಳಕಂಡ ಸವಲತ್ತು ದೊರಕುತ್ತಿವೆ.
ಕೇಂದ್ರ ಸರ್ಕಾರದಿಂದ:

1. ಸಹ ವಿದ್ಯುತ್ ಉತ್ಪಾದನಾ ಘಟಕ ಅಳವಡಿಸಲು ಸಕ್ಕರೆ ಕಾರ್ಖಾನೆಗಳಿಗೆ ಕೇಂದ್ರ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಇತ್ತೀಚಿನ ತಿದ್ದುಪಡಿಯಂತೆ ಕಡಿಮೆ ಬಡ್ಡಿಗೆ ಸಾಲ ಸೌಲಭ್ಯ ದೊರೆಯುತ್ತದೆ.

2. ಎಥನಾಲ್ ಘಟಕ ಅಳವಡಿಸಿಕೊಳ್ಳುವ ಸಕ್ಕರೆ ಕಾರ್ಖಾನೆಗಳಿಗೆ ಸಕ್ಕರೆ ಅಭಿವೃದ್ಧಿ ನಿಧಿಯಿಂದ ಕಡಿಮೆ ಬಡ್ಡಿಗೆ ಸಾಲ ಸೌಲಭ್ಯ ದೊರಕುತ್ತದೆ.

3. ರಫ್ತು ಮಾಡುವ ಸಕ್ಕರೆಗೆ ಇತ್ತೀಚಿನ ತಿದ್ದುಪಡಿಯಂತೆ ಸಾಗಾಣಿಕೆ ಸಹಾಯಧನ ಸಕ್ಕರೆ ಅಭಿವೃದ್ಧಿ ನಿಧಿಯಿಂದ ದೊರೆಯುತ್ತದೆ.

ರಾಜ್ಯ ಸರ್ಕಾರದಿಂದ:

1. ಕಬ್ಬು ಖರೀದಿ ತೆರಿಗೆಯಿಂದ ಟನ್ ಒಂದಕ್ಕೆ ರೂ. 15.00 ರಂತೆ ಕಬ್ಬು ಬೆಳೆಗಾರರಿಗೆ ಕಾರ್ಖಾನೆಗಳು ಹಸ್ತಾಂತರಿಸಬೇಕಾಗಿರುವ ಸಹಾಯಧನ ಯೋಜನೆಯನ್ನು ದಿನಾಂಕ: 1.4.2001 ರಿಂದ 2 ವರ್ಷಗಳ ಅವಧಿಗೆ ಮುಂದುವರೆಸಲಾಗಿದೆ.

2. ರಫ್ತು ಮಾಡಲಾದ ಸಕ್ಕರೆಯನ್ನು ಉತ್ಪಾದಿಸಲು ಉಪಯೋಗಿಸಲಾದ ಕಬ್ಬಿಗೆ ಖರೀದಿ ತೆರಿಗೆಯಿಂದ ವಿನಾಯಿತಿ ನೀಡಲಾಗಿದೆ.

3. ಸಹ ವಿದ್ಯುತ್ ಉತ್ಪಾದಿಸುವ ಕಾರ್ಖಾನೆಗಳಿಗೆ ಅವು ಉತ್ಪಾದಿಸಿ ರಫ್ತು ಮಾಡುವ ಪ್ರತಿ ಮೆ. ವ್ಯಾಟ್ ವಿದ್ಯುತ್‌ಗೆ ರೂ. 25.00 ಲಕ್ಷ ಬಂಡವಾಳ ಸಹಾಯಧನವನ್ನು ದಿನಾಂಕ: 1.4.2001 ರಿಂದ 3 ವರ್ಷಗಳ ಅವಧಿಗೆ ಮುಂದುವರೆಸಲಾಗಿದೆ.

4. ಬಿಕ್ಕಟ್ಟಿನಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ನೆರವು ನೀಡಲು ಸರ್ಕಾರ ಮತ್ತು ಕಾರ್ಖಾನೆಗಳು ಸಮಾನ ಅನುದಾನದೊಂದಿಗೆ ರಾಜ್ಯ ಮಟ್ಟದಲ್ಲೂ ಸಕ್ಕರೆ ನಿಧಿಯನ್ನು ಸ್ಥಾಪಿಸಲು ಪ್ರಸ್ತಾಪಿಸಿದ್ದು ಈ ವರ್ಷದ ಆಯವ್ಯಯದಲ್ಲಿ ಈ ಬಗ್ಗೆ ರೂ. 25.00 ಕೋಟಿ ಮೊತ್ತ ಒದಗಿಸಲಾಗಿದೆ. ಈ ಯೋಜನೆಯ ರೂಪರೇಖೆಗಳನ್ನು ತಯಾರಿಸಲಾಗುತ್ತಿದೆ.

ಅನುಬಂಧ-1

ಸಹಕಾರಿ ಸಕ್ಕರೆ ಕಾರ್ಖಾನೆಗಳ ಲಾಭ-ನಷ್ಟದ ವಿವರಗಳು

31.3.2000ಕ್ಕೆ ಇದ್ದಂತೆ

(ಲಕ್ಷ ರೂ.ಗಳು)

ಸಂಖ್ಯೆ	ಕಾರ್ಖಾನೆಯ ಹೆಸರು	ಲಾಭ	ನಷ್ಟ	ಕ್ರೋಢೀಕೃತ ನಷ್ಟ
1.	ಹಾಲಸಿದ್ದನಾಥ ಸಸಕಾ, ನಿಪ್ಪಾಣಿ	25.07	-	1674.04
2.	ಘಟಪ್ರಭಾ ಸಸಕಾ, ಗೋಕಾಕ್	96.52	-	245.58
3.	ಹೇಮಾವತಿ ಸಸಕಾ, ಶ್ರೀನಿವಾಸಪುರ	-	97.07	590.52
4.	ಪಾಂಡವಪುರ ಸಸಕಾ, ಪಾಂಡವಪುರ	-	1626.05	6919.63
5.	ದೂಧಗಂಗಾ ಕೃಷ್ಣಾ ಸಸಕಾ,	505.17	-	2290.22
6.	ರೈತರ ಸಸಕಾ, ರನ್ನನಗರ	-	367.55	487.63
7.	ಸಸಕಾ(ನಿ), ಆಳಂದ	-	211.43	2240.23
8.	ಶ್ರೀ ಹಿರಣ್ಯಕೇಸಿ ಸಸಕಾ, ಸಂಕೇಶ್ವರ	24.48	-	-
9.	ರಾಯಬಾಗ್ ಸರ್ಕಾರ, ರಾಯಬಾಗ್	-	2099.15	7310.01
10.	ಭಾಗ್ಯಲಕ್ಷ್ಮಿ ಸಸಕಾ, ಖಾನಾಪುರ	-	508.19	1953.31
11.	ಭದ್ರಾ ಸಸಕಾ, ದೊಡ್ಡಬಾತಿ	5.23	-	249.91

ಸಂಖ್ಯೆ ಕಾರ್ಖಾನೆಯ ಹೆಸರು	ಲಾಭ	ನಷ್ಟ	ಕ್ರೋಢೀಕೃತ ನಷ್ಟ
12. ಮಲಪ್ರಭಾ ಸರ್ಕಾರ, ಎಂ.ಕೆ ಹುಬ್ಬಳ್ಳಿ	2.17	-	-
13. ಕರ್ನಾಟಕ ಸಸಕಾ, ಹಾವೇರಿ	-	146.63	1348.75
14. ನಂದಿ ಸಸಕಾ, ಕೃಷ್ಣಾನಗರ	26.25	-	-
15. ವಾಣಿ ವಿಲಾಸ ಸಸಕಾ, ಹಿರಿಯೂರು	-	277.76	1013.62
16. ದಕ್ಷಿಣ ಕನ್ನಡ ಸಸಕಾ ಬ್ರಹ್ಮಾವರ	-	329.41	3023.10
17. ಬೀದರ್ ಸಸಕಾ, ಹಳ್ಳಿಖೇಡ್	63.97	-	1619.21
18. ಶ್ರೀರಾಮ ಸಸಕಾ, ಚುಂಚನಕಟ್ಟೆ	-	224.86	1376.73
ಒಟ್ಟು	748.86	5888.20	3262.49

2000-01ನೇ ಸಾಲಿಗೆ:

ಲಾಭದಲ್ಲಿ - 8 ಸಹಕಾರಿ ಸಕ್ಕರೆ ಕಾರ್ಖಾನೆಗಳು ಇರುತ್ತವೆ.

ನಷ್ಟದಲ್ಲಿ - 10 ಸಹಕಾರಿ ಸಕ್ಕರೆ ಕಾರ್ಖಾನೆಗಳು ಇರುತ್ತವೆ.

ಖಾನಾಪುರ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಃ ಪ್ರಾರಂಭಿಸುವುದು

1855(2310): ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಖಾನಾಪುರ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ಇನ್ನೂವರೆಗೆ ಪ್ರಾರಂಭವಾಗದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಸಕ್ಕರೆ ಕಾರ್ಖಾನೆ ಇನ್ನೂವರೆಗೂ ಪ್ರಾರಂಭವಾಗದೇ ಇರುವ ಕಾರಣಗಳೇನು?

ಇ. ಪ್ರಾರಂಭ ಮಾಡಲು ಯಾವ ಕ್ರಮ ಕೈಗೊಳ್ಳಲಾಗಿದೆ?

ಈ. ಇನ್ನು ಎಷ್ಟು ದಿವಸಗಳೊಳಗಾಗಿ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು)

ಅ. ಹೌದು.

ಆ. ಕಾರ್ಖಾನೆಯು 2001-02ನೇ ಹಂಗಾಮಿಗೆ ರೈತರು ಸರಬರಾಜು ಮಾಡಿದ ಕಬ್ಬಿನ ಬಿಲ್ಲಿನ ಮೊತ್ತ ರೂ. 14.29 ಕೋಟಿ ಬಾಕಿ ಉಳಿದಿದೆ ಮತ್ತು ಕಾರ್ಖಾನೆಯು ಡಿಸಿಸಿ ಬ್ಯಾಂಕ್‌ಗೆ ರೂ. 37.47 ಕೋಟಿ ಮರುಪಾವತಿ ಮಾಡಬೇಕಾಗಿರುತ್ತದೆ. ಕಾರ್ಖಾನೆಯು ರೂ. 14.00 ಕೋಟಿ ರಷ್ಟು ಖಾಸಗಿ ಠೇವಣಿ ಪಡೆದಿರುತ್ತಾರೆ. ಈ ಹಣವನ್ನು ಮರುಸಂದಾಯ ಮಾಡಬೇಕಾಗಿರುತ್ತದೆ. ಈ ಕಾರ್ಖಾನೆಯ ಹೊಣೆ ರೂ. 60.65 ಕೋಟಿಯಿರುತ್ತದೆ. ಹಣದ ಮುಗ್ಗಟ್ಟಿನಿಂದ ಸಿಬ್ಬಂದಿಗಳ 2002ರ ಮೇಲೆ ತಿಂಗಳಿನಿಂದ ವೇತನ ಪಾವತಿಸಿರುವುದಿಲ್ಲ. ಈ ಕಾರಣದಿಂದ ನೌಕರರು ಮುಷ್ಕರ ಹೂಡಿ ಕೆಲಸ ಸ್ಥಗಿತಗೊಳಿಸಿರುತ್ತಾರೆ. ಇದರಿಂದ ಬಿಡುಗಡೆಯಾದ ಸಕ್ಕರೆ ಮಾರಾಟ ಮಾಡಲು ಸಹಾ ಸಾಧ್ಯವಾಗಿರುವುದಿಲ್ಲ. ಆಡಳಿತ ಮಂಡಳಿಯವರು ಸಮೂಹ